**ವ್ಯಾಖ್ಯಾನ**

# <u>ಹಾ ಕೃಷ್ಣ ಹಾ ದ್ವಾರಕಾವಾಸಿ</u>

ಉಗಾಭೋಗದ ಚಿಂತನೆ:

> **ಹಾ ಕೃಷ್ಣ ಹಾ ದ್ವಾರಕಾವಾಸಿ ! ಎಂದೆನಲು**
>
> **ಶ್ರೀಪತಿ ಅಕ್ಷಯ ವಸ್ತ್ರವನಿತ್ತು**
>
> **ದ್ರೌಪತಿಯ ಅಭಿಮಾನವ ಕಾಯ್ದ ನಮ್ಮ**
>
> **ಆಪತ್ತಿಗೆ ಆಹೆನೆಂಬ ಶ್ರೀಪತಿ ಪುರಂದರ ವಿಠಲ**
>
> **ಆ ಪಾರ್ಥನ ರಮಣಿಗೆ ಅಕ್ಷಯ ವಸ್ತ್ರವನಿತ್ತು ಕಾಯ್ದ**

**"ಸಂತತಂ ಚಂತಯೇನಂತಂ ಅಂತಕಾಲೇ ವಿಶೇಷತ: "**

ಇದು ಶ್ರೀ ಮಧ್ವರು ಆಜ್ಞಾಪಿಸಿದ ಸಾಧನೆಯ ಬೀಜ ವಾಕ್ಯ.

**"ಕೃಷ್ಣಾ ಕೃಷ್ಣಾ ಕೃಷ್ಣಾ ಎಂದು ಮೂರು ಬಾರಿ ನೆನೆಯಿರೋ ಸಂತುಷ್ಟನಾಗಿ ಮುಕುತಿಕೊಟ್ಟು ಮಿಕ್ಕ ಭಾರ ಹೊರುವನೋ.."** ಶ್ರೀ ವ್ಯಾಸರಾಜರ ನುಡಿ ಮುತ್ತಿದು.

ಈ ಅಭಿಪ್ರಾಯಗಳನ್ನೇ ಶ್ರೀ ಪುರಂದರ ದಾಸರ ಈ ಉಗಾಭೋಗದಲ್ಲಿ ಕಾಣಬಹುದು.

ಕೃಷ್ಣ ನಾಮಾರ್ಥವೇ ತಿಳಿಸುವಂತೆ, ಒಮ್ಮೆ ಭಕ್ತಿ ಮತ್ತು ವಿಶ್ವಾಸದಿಂದ ಶ್ರವಣ, ಮನನ, ಕೀರ್ತನ, ಸ್ಮರಣ ಮಾಡಿದವರ ಸಕಲ ಪಾಪಗಳನ್ನು ಕರ್ಷಣ(ಸೆಳೆದು) ಮಾಡಿ ಅವರಿಗೆ ಮುಕ್ತಿಯನ್ನು ಕೊಡುತ್ತಾನೆ.

ಏಕೆಂದರೆ ಅವನು ಕರುಣಾಮಯಿಯಾಗಿದ್ದಾನೆ.

ಅದನ್ನೇ ದಾಸರು ಇಲ್ಲಿ ಸದಯ ದಯದಿಂದ ಎನ್ನುತ್ತಾರೆ.

**"ಅನವರತ ನೆನೆವವರನಂತಾಸನವೆ ಮೊದಲಾದಾಲಯದೊಳಿಟ್ಟಣುಗನಂದದಿ ಅವರ ವಶನಾಗುವ ಮಹಾ ಮಹಿಮ"** ಎನ್ನುತ್ತಾರೆ ಶ್ರೀ ಜಗನ್ನಾಥದಾಸರು.

ನಮ್ಮದಿ ಎನ್ನುವಲ್ಲಿ ಭಗವಂತನ ಭಕ್ತವಾತ್ಸಲ್ಯವನ್ನು ದಾಸರು ಬಿಂಬಿಸುತ್ತಾರೆ.

ದುರ್ವಾಸರು ಅಂಬರೀಶನಿಗೆ ಅಪರಾಧವೆಸಗಿದಾಗ ಶ್ರೀಹರಿಯ ಸುದರ್ಶನ ಚಕ್ರ ಅಟ್ಟಿಸಿಕೊಂಡು ಬಂದಿತು, ವಿಷ್ಣುವಿನಲ್ಲಿ ಹೋಗಿ ನಿನ್ನ ಚಕ್ರದಿಂದ ನನ್ನನ್ನು ರಕ್ಷಿಸು ಎನ್ನುತ್ತಾರೆ.  ಆಗ ದೇವರು ಹೇಳುವ ಮಾತು

**" ಅಹಂ ಭಕ್ತಪರಾಧೀನ:"**

ದುರ್ವಾಸರೇ ನೀವು ಅಂಬರೀಶನಲ್ಲಿಗೇ ಹೋಗಿರಿ ಎನ್ನುತ್ತಾನೆ.

ಇದು ಭಗವಂತ ತನ್ನ ನೆನೆವವರಿಗೆ ಮಾಡುವ ಅನುಗ್ರಹ.

ಅರ್ಜುನನ ರಥಕ್ಕೆ ಸಾರಥಿಯಾದದ್ದು, ಬಲಿಯ ಮನೆಯ ಬಾಗಿಲ ಕಾಯ್ದದದ್ದು, ಗೋಪ ಬಾಲರೊಂದಿಗೆ ಆಕಳು ಕಾಯ್ದದ್ದು, ಇನ್ನೂ ಅನೇಕಾನೇಕ ಭಕ್ತರಿಗೆ ಅನುಗ್ರಹ ಮಾಡಿದ್ದು ಅವರು ತನ್ನ ನಾಮ ಸ್ಮರಣೆ ನಿರಂತರ ಮಾಡುವರೆಂಬ ಕಾರಣಕ್ಕಾಗಿಯೇ.

ಏನು ಕರುಣಾನಿಧಿಯೋ ಹರಿ ಮತ್ತೇನು ಭಕ್ತಾಧೀನನೋ ....

ಒಮ್ಮೆ ಬಾಯ್ದೆರೆದು ಕೃಷ್ಣಾ ಎನ್ನೋಣ ....

**ಶ್ರೀ ಕೃಷ್ಣಾರ್ಪಣಮಸ್ತು**

**ಲೇಖಕರು:** ಸೌ. ಚೇತನಾ ವಾಮಾನರಾವ ಕುಲಕರ್ಣಿ, ವಿಜಯಪುರ, ಕರ್ನಾಟಕ